ಡಿ.ಎಲ್. ನಾಗರಾಜ್, ಚನ್ನಗಿರಿ

*ಹೆಣ್ಣುಮಕ್ಕಳು ತುಟಿ ಕೆಂಪಾಗಿಸಲು ಲಿಪ್ ಸ್ಟಿಕ್ ಹಚ್ಚುವ ಬದಲು ಎಲೆ-ಅಡಿಕೆ ಜಗಿಯಬಹುದಲ್ಲವೆ?*



ಛೆ! ಈಗಿನ ಸುಕೋಮಲಿಯರಿಗೆ ಜಗಿದರೆ ವಸಡು, ಹಲ್ಲು, ದವಡೆ, ಎಲ್ಲಾ ನೋಯುವುದಂತೆ!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು

*ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ. ಮಾವನಿಗೆ?*

ಅವನಿಗೂ ಕಾಲ ಇರುತ್ತದೆ ಕೊಳ್ಳೇಕಾಲ, ದುಷ್ಕಾಲ, ರಾಹುಕಾಲ, ಯಮಗಂಡಕಾಲ.

ವಿ. ಹೇಮಂತ ಕುಮಾರ್, ಬೆಂಗಳೂರು

*ದೇವರು ಸ್ವರ್ಗದಲ್ಲಿದ್ದರೂ ಇಲ್ಲೇಕೆ ಗುಡಿಗಳು?*

ಅದು ಹೆಡ್ ಆಫೀಸ್, ಇವುಗಳು ಬುಕಿಂಗ್ ಆಫೀಸ್!

ಚೈತ್ರ, ಕೆ.ಎಂ. ದೊಡ್ಡಿ

*ಈರುಳ್ಳಿ ಕೊಯ್ದರೆ ಕಣ್ಣೀರೇಕೆ ಬರುತ್ತದೆ?*



ಅದರಲ್ಲಿ ಟಿಯರ್ ಗ್ಯಾಸ್ ಇರುತ್ತದಂತೆ!

ಶರಣಪ್ಪ ಚಟ್ಟಿ, ಗೋಲಗೇರಿ

*ಕಡಿಮೆ ಜಾಗದಲ್ಲಿ ಹೆಚ್ಚಿನ ಅಲಂಕಾರವಾಗುವುದು ಎಲ್ಲಿ?*

ಅವಿನ್ಯೂ ರೋಡ್‌ನ ಅತಿ ಸಣ್ಣ ಬ್ಯೂಟಿ ಪಾರ್ಲರ್‌ನಲ್ಲಿ!

ಡಿ.ಎಲ್. ಶ್ವೇತಾ, ಚನ್ನಗಿರಿ

*ಬಿಜೆಪಿ ಆರ್‌ಎಸ್‌ಎಸ್ ನಿಯಂತ್ರಣದಲ್ಲಿದೆಯೋ, ಹೈಕಮಾಂಡ್ ನಿಯಂತ್ರಣದಲ್ಲಿದೆಯೋ?*

ಸದ್ಯದಲ್ಲಿ ಅದು ಸೂತ್ರ, ಬಾಲಂಗೋಚಿ ಇಲ್ಲದ ಗಾಳಿಪಟ!

ಎಸ್. ರಮೇಶ್, ಮದ್ದೂರು

*ಬಾಲ್ಯದಲ್ಲಿ ಕ್ರೀಡಾಸಕ್ತಿ, ಯೌವನದಲ್ಲಿ ಮೋಹಾಸಕ್ತಿ, ಮುಪ್ಪಿನಲ್ಲಿ ಚಿಂತಾಸಕ್ತಿ. ನಿಮಗೀಗ ಯಾವ ಆಸಕ್ತಿ?*

ಹೀಗೆ ಆಸಕ್ತಿಯಿಂದ ಪ್ರಶ್ನೆ ಕೇಳುವ ಎಲ್ಲರ ಬಗ್ಗೆ ಆಸಕ್ತಿ!

ಕೊಕ್ಕಡ ವೆಂಕಟ್ರಮಣಭಟ್, ಮಂಡ್ಯ

*ದಂಡಿಯಾತ್ರೆಗೂ, ದಂಡಯಾತ್ರೆಗೂ ಏನಾದರೂ ವ್ಯತ್ಯಾಸ ಇದೆಯೆ?*

ದಂಡಿಯಾತ್ರೆ ಕೈಗೊಂಡವರು ಫಸ್ಟ್ ಅಟೆಂಪ್ಟ್ ನಲ್ಲೇ ಪಾಸ್!

ಪೇಂಟರ್ ಪಾಪು, ಸಂತೇಮರಹಳ್ಳಿ

*ಜೀವನದ ಅತಿ ದೊಡ್ಡ ವಿಮೆ ಯಾವುದು?*

ವಿಶ್ವಾಸ, ಮೆಚ್ಚಿಗೆ!

ದಿನೇಶ್ ಕೆ. ಕಳ್ಳಿಮೆಳೆದೊಡ್ಡಿ

*ವಿದ್ಯಾರ್ಥಿಜೀವನದಲ್ಲಿ ಜಾತಿ ಆಧಾರಿತ ವ್ಯವಸ್ಥೆ ಬೇಕೋ, ಬೇಡವೋ...?*

ಜಾತಿ ಮನುಷ್ಯಜಾತಿಯನ್ನೇ ಕೆಡಿಸತ್ತೆ!

ಪಿ.ಎಸ್. ಶ್ರೀವತ್ಸ, ಬೆಂಗಳೂರು

*ಬಹಳ ಜನರಿಗೆ ದೇಹ ಬೆಳೆಯುವಷ್ಟು ಬೇಗ ಬುದ್ಧಿ ಬೆಳೆಯದಿರಲು ಕಾರಣ...?*

ದೇಹಕ್ಕೆ ಮಾತ್ರ ಆಹಾರ ಕೊಡುವುದರಿಂದ!

ಬಸವಣ್ಣ ಹೊನಖಾಂಡೆ, ಬಸವನ ಬಾಗೇವಾಡಿ

*ಹೆಂಡತಿಯನ್ನು ಸಂತೃಪ್ತಿಗೊಳಿಸುವ ಮಾತು ಯಾವುದು ಶಿವ?*

ನಿನ್ನಿಷ್ಟ ಬಂದಷ್ಟು ಹೊತ್ತು ಶಾಪಿಂಗ್ ಮಾಡು ಡಿಯರ್, ಅದೆಷ್ಟು ಖರ್ಚಾದರೂ ಸರಿ, ಡೋಂಟ್ ವರಿ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ಎಲ್ಲಾ ಮರಗಳು ಹಣ್ಣಿನ ಬದಲು ಹಣ ಕೊಟ್ಟರೆ ಹುಡುಗಿಯರು ಏನು ಮಾಡುತ್ತಿದ್ದರು?*

ಹಣ್ಣು ಕೊಡುವವನಿಗೇ ಹೆಚ್ಚು ಲೈನ್ ಹೊಡೆಯುತ್ತಿದ್ದರು!

## ಬಹುಮಾನಿತ ಪ್ರಶ್ನೆ

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

*ಮಠಾಧಿಪತಿಗಳಂತೆ ಮಠಾಧಿಪತಿಗಳೇಕಿಲ್ಲ?*

ಸತಿ ಇದ್ದೆಡೆ ವಸತಿ, ಸವತಿ ಹೆಚ್ಚಾಗಿಬಿಡುವುದರಿಂದ!

ಎಂ.ವಿ. ವೆಂಕಮ್ಮ, ಬಳ್ಳಾರಿ

*ಬದುಕಿದ್ದಾಗ ಮತ್ತು ಸತ್ತಾಗ ಉಪಯೋಗವಾಗುವುದು ಎಲ್‌ಐಸಿ ಮತ್ತು ರಾಜಕೀಯ ಮಾತ್ರವೆ?*

ಮರವನ್ನೇ ಮರೆತಿರಲ್ಲಾ! ಬದುಕಿದ್ದಾಗ ತೊಟ್ಟಿಲು, ಮಣೆ, ಹಸೆಮಣೆ, ಊರುಗೋಲಾಗಿ, ಸತ್ತಾಗ ಚಿತೆಯಾಗಿ ಜೊತೆ ಇರುತ್ತದೆ ಮರ!

ನಾರಾಯಣಸ್ವಾಮಿ, ಬೋಧನಹೊಸಹಳ್ಳಿ

*ಹೆಣ್ಣು ಅಪ್ಸರೆ, ಗಂಡು...?*

ಅವಳ ಸೆರೆ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ನಿಮ್ಮನ್ನು ಮುಖ್ಯಮಂತ್ರಿ ಮಾಡಿದರೆ ನಾನು ಕೇಳಿದಾಗ ಅಧಿಕಾರ ಬಿಟ್ಟುಕೊಡುವಿರಾ?*




ನೀವು ಜೈಲಿಗೆ ಹೋಗಿ ಬನ್ನಿ ಸಾರ್, ಆಮೇಲೆ ನೋಡ್ಕೊಳ್ಳೋಣ!

ಎಂ.ಸಿ. ಕೃಷ್ಣಪ್ರಸಾದ್, ರಾಜಾಜಿನಗರ

*ನೀವು ರಾಮ ಎಂದರೆ ಸೀತಾರಾಮನಾ ಇಲ್ಲವೇ ಬರೀ...?*

ಚಳಿಗಾಲದಲ್ಲಿ ಶೀತಾರಾಮ, ಬೇಸಿಗೆಯಲ್ಲಿ ಬರಿ ರಾಮ, ಸತ್ತಾಗ bury ರಾಮ!

ಸುರೇಶ ಅಂಗಡಿ, ಹೂವಿನಹಡಗಲಿ

*ರಾಜ್ಯದ ಹಲವೆಡೆ ಬರ ಇದ್ದರೂ ಮಾಜಿ ಸಿಎಂ ವಿಜೃಂಭಣೆಯ ಹುಟ್ಟುಹಬ್ಬ ಆಚರಿಸಿದ್ದು ಸರಿಯೆ?*

ಯಜಮಾನನೇ ಸತ್ತಿದ್ದರೂ ಬೆಳಗಾದ ತಕ್ಷಣ ಕೊರಳೇರಿಸಿ ಕೊಕ್ಕೊಕ್ಕೋ ಎನ್ನುವುದು ಹುಂಜದ ನೈಸರ್ಗಿಕ ನಿಯಮ!

ನಾ.ರಾ.ಕೃ. ರೆಡ್ಡಿ, ನಾರಾಯಣಘಟ್ಟ

*ನನ್ನ ಮೇಲೆ ಗೂಂಡಾಗಿರಿ ನಡೆದಿದೆ. ದೂರು ದಾಖಲಿಸಲು ಯಾವ ವಕೀಲರನ್ನು ಸಂಪರ್ಕಿಸಲಿ?*

ಹುಷಾರು ಸ್ವಾಮಿ, ಈಗ ಕೆಲವು ಲಾಯರ್‌ಗಳು Law ಬಿಟ್ಟು err ಮಾಡುವುದೇ ಹೆಚ್ಚಾಗಿದೆ.

ರಾಮ್